ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:529/2017

ಚಾಸಾ:3 ಪ್ರಾಸಾ:4

ದಿನಾಂಕ: 11.08.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರಾಮ ಮೂರ್ತಿ ಭಟ್ |
| ತಂದೆಯ ಹೆಸರು | : | ಕೃಷ್ಣ ಮೂರ್ತಿ ಭಟ್ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಮೆಡಿಕಲ್ ಶಾಪ್ |
| ವಾಸ ಸ್ಥಳ | : | ಕೋಟಾ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಬೀಜಾಡಿಯ ವೈ ಜಂಕ್ಷನ್ ಬಳಿ ದಿ: 10-12-2016 ರಂದು ಗುರುರಾಜ ಬಾಯರಿಯವರಿಗೆ ಅಪಘಾತವಾಗಿದ್ದು, ಆಗ ನಾನು ಮತ್ತು ಚಾಸಾ-4 ರವರು ಸ್ಥಳದಲ್ಲಿ ಇದ್ದು, ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಿಪಿ-4 ಮತ್ತು 5 ರಲ್ಲಿ ಕಂಡು ಬರುವ ವಾಹನ ಇದ್ದು, ಅದನ್ನು ವಶಕ್ಕೆ ಪಡೆದು ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 1-30ರವರೆಗೂ ಜರುಗಿಸಿ ನಕ್ಷೆ ತಯಾರಿಸಿ ವಾಹನದ ಪೋಟೋ ತೆಗೆದಿರುತ್ತಾರೆ.

ಸಾಕ್ಷಿಗೆ ನಿಪಿ-2 ಮತ್ತು 3ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2(ಸಿ) ಮತ್ತು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-4 ರಿಂದ 6ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎ ಯು ಎಸ್ ರವರಿಂದ:**

ನಾನು ಕೋಟಾದಲ್ಲಿ ಮೆಡಿಕಲ್ ಶಾಪ್ ನಡೆಸುತ್ತೇನೆ. ಚಾಸಾ-4 ನನ್ನ ಅಣ್ಣ. ನಾವಿಬ್ಬರೂ ಒಟ್ಟಾಗಿ ಕೆಲಸ ಮಾಡುತ್ತೇವೆ. ನಮ್ಮ ವ್ಯವಹಾರದಲ್ಲಿ ಯಾವಾಗಲೂ ತೊಡಗಿಕೊಂಡಿದ್ದು ಸದ್ರಿ ದಿನ ವ್ಯವಹಾರದಲ್ಲಿ ಇದ್ದೇವು ಎಂದರೆ ಸರಿ. ಚಾಸಾ-1 ರವರು ಸ್ಥಳಕ್ಕೆ ಬರುವಂತೆ ಸೂಚಿಸಿರುತ್ತಾರೆ. ಆತ ನಮ್ಮ ಸಂಬಂಧಿಕರು. ಮೃತ ಗುರುರಾಜರವರಿಗೆ ಹೆಂಡತಿ

ಮತ್ತು ಮಕ್ಕಳು ಇಲ್ಲ. ಚಾಸಾ-1ರವರು ಸಿದ್ದಾಪುರದ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಆತ ಸದ್ರಿ ದಿನ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ನಿಪಿ-2ರಲ್ಲಿ ಅಪಘಾತವಾದ ಸ್ಥಳ, ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದ ಬಗ್ಗೆ, ಗಾಡಿಯ ಬಗ್ಗೆ ಬರೆದಿರುತ್ತಾರೆ. ಆಗ 2-3 ಪೊಲೀಸರು ಇದ್ದರು. ಅಪಘಾತವು ಜಂಕ್ಷನ್‌ನ ಬಲಬದಿಗೆ ಆಗಿರುತ್ತದೆ. ಅಲ್ಲಿ 2 ರಸ್ತೆಗಳು ಇರುತ್ತದೆ.

ಅಪಘಾತದ ಸ್ಥಳವನ್ನು ನಾನು ತೋರಿಸಿಲ್ಲ. ಪೊಲೀಸರು ಸೂಚಿಸಿದಂತೆ ಸಹಿ ಮಾಡಿರುತ್ತೇನೆ. ಅದು ಕ್ವಾಲೀಸ್ ಗಾಡಿಯಾಗಿದ್ದು, ಕೆಂಪು ಬಣ್ಣದ್ದಾಗಿರುತ್ತದೆ. ಘಟನಾ ಸ್ಥಳದಲ್ಲಿಯೇ ಸದ್ರಿ ಗಾಡಿ ಇತ್ತು. ಅದರ ನಿಖರವಾದ ಸಂಖ್ಯೆ ತಿಳಿದಿಲ್ಲ. 7548 ಇರಬಹುದು. ಘಟನಾ ಸ್ಥಳದ ಸುತ್ತಮುತ್ತಲೂ ಗ್ಯಾರೇಜು ಇರಬಹುದು. ಬಲಬದಿಯಲ್ಲಿ ಗುಡಿಗಾರರ ಸಿಮೆಂಟ್ ಕಂಬಗಳ ಅಂಗಡಿ, ಎಡ ಬದಿಯಲ್ಲಿ ಅಂಗಡಿಗಳು ಇವೆ. ಉಳಿದ ಚೆಕ್ಕು ಬಂಧಿಗಳನ್ನು ಹೇಳಲಾಗುವುದಿಲ್ಲ. ಮೇಲೆ ಹೇಳಿದ ಯಾವುದೇ ಚೆಕ್ಕು ಬಂಧಿಗಳನ್ನು ನಿಪಿ-2 ರಲ್ಲಿ ನಮೂದಿಸದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಸ್ಥಳದಲ್ಲಿ ವೈ ಜಂಕ್ಷನ್ ಇಲ್ಲ ಎಂದರೆ ಸರಿಯಲ್ಲ.

ವಾಹನದ ಬಾನೇಟು ಜಖಂಗೊಂಡಿರುತ್ತದೆ. ವಾಹನದ ಒಳಗೂ ಜಖಂಗೊಂಡಿತ್ತು. ಸುಮಾರು 4-5 ವಾಹನಗಳು ನಿಂತಿದ್ದವು. ಅಪಘಾತಪಡಿಸಿದ ವಾಹನ ಯಾವುದು ಎಂದು ಚಾಸಾ-1 ರವರು ತಿಳಿಸಿರುತ್ತಾರೆ. ಮೃತರಿಗೆ ಕುಟುಂಬಸ್ಥರು ಇಲ್ಲದ ಕಾರಣ ನಾನು, ಚಾಸಾ-1, 2 ಮತ್ತು 4 ರವರು ಸೇರಿ ಹಣವನ್ನು ಪಡೆದುಕೊಳ್ಳಲು ಆರೋಪಿಯ ವಿರುದ್ದ ಈ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸಹಿ ಮಾಡಿದ ಸ್ಥಳಕ್ಕೂ ಅಪಘಾತವಾದ ಸ್ಥಳಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ರಸ್ತೆ ದಾಟಲು ನಿಂತಿದ್ದಾಗ ಅಪಘಾತವಾಗಿರುವುದಾಗಿ ನನಗೆ ತಿಳಿದಿರುತ್ತದೆ.

ನಕ್ಷೆ ತಯಾರಿಸುವಾಗ ನಾನು ಇರಲಿಲ್ಲ. ನಿಪಿ-3 ರಲ್ಲಿರುವ ನಕ್ಷೆಯನ್ನು ನೋಡಿದರೆ ಗುರುರಾಜ ಬಾಯರಿಯವರ ತಪ್ಪಿನಿಂದ ಅಪಘಾತವಾಗಿರುವುದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ಪಶ್ಚಿಮ ಬದಿಯಿಂದ ಪೂರ್ವದ ಬದಿಗೆ ರಸ್ತೆ ದಾಟುವಾಗ ಅಪಘಾತವಾಗಿರುವ

ಕಾರಣ ಗಾಯಾಳು ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-2ರಲ್ಲಿ ಬರೆದಿರುವ ಕೆಲವು ವಿಚಾರಗಳು ನೆನಪಿಲ್ಲ. ದಾಖಲಾತಿಗಳ ಪ್ರಕಾರ ಪೂರ್ವ ಅಂಚಿನಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿ. ಸದ್ರಿ ದಿನ ರಸ್ತೆ ದಾಟುತ್ತಿದ್ದಾಗ ಬೇರೆ ಯಾವುದೋ ವಾಹನ ಡಿಕ್ಕಿ ಪಡಿಸಿದ್ದು, ಈ ಪ್ರಕರಣದ ದಾಖಲಿಸುವ ಉದ್ದೇಶದಿಂದ ಆರೋಪಿಯ ವಾಹನವನ್ನು ಒಳಗೂಡಿಸಿ ಈ ಪ್ರಕರಣ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-2 ಮತ್ತು 3ಕ್ಕೆ ಠಾಣೆಯಲ್ಲಿ ಸಹಿ ಮಾಡಿರಬಹುದು. ಅದಕ್ಕೆ ಪೂರಕವಾಗಿ ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಚಾಸಾ-1ರವರು ಸೂಚಿಸಿದಂತೆ ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**